***P.W-3***

**ದಿನಾಂಕಃ 19-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ .

ಅರ್ಜಿದಾರರಿಗೆ ನೀಡಿದ ಅಂಗನ್ಯೂನ್ಯತೆ ಪ್ರಮಾಣ ಪತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-16 ಮತ್ತು 27 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-16(ಎ) ಮತ್ತು 27(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎನ್ ಎಂ ಬಿ ವಕೀಲರಿಂದಃ**

1. ಅರ್ಜಿದಾರರಾದ ಕೇಶವ ಮೂರ್ತಿ ದಿಃ 24-09-2024 ರಂದು ನನ್ನ ಬಳಿ ಬಂದಿದ್ದರು. ದಿಃ 24-09-2024 ರ ಪೂರ್ವದಲ್ಲಿ ಅರ್ಜಿದಾರರಾದ ಕೇಶವಮೂರ್ತಿ ನನ್ನ ಬಳಿ ಯಾವುದೇ ಚಿಕಿತ್ಸೆ ಪಡೆದಿರಲಿಲ್ಲ. ನನ್ನ ಬಳಿ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಬಂದಿದ್ದರು ಎಂದರೆ ಸರಿ. ಡಿ ಜಿ ಹೆಚ್ ಎಸ್ ಗೈಡ್ ಲೈನ್ಸ ಪ್ರಕಾರ ನಾನು ಅಂಗನ್ಯೂನ್ಯತೆ ಪ್ರಮಾಣವನ್ನು ನಿರ್ಧಾರ ಮಾಡಿರುತ್ತೇನೆ. ಅವರಿಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡುವ ಪೂರ್ವದಲ್ಲಿ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ ಮತ್ತು ಎಕ್ಸರೆ ಮಾಡಿರುತ್ತೇನೆ. ಅವರ ಗಾಯದ ಪ್ರಮಾಣ ಪತ್ರ, ಬಿಡುಗಡೆ ಪ್ರಮಾಣ ಪತ್ರಗಳನ್ನು ಪರಿಶೀಲಿಸಿರುತ್ತೇನೆ. ಡಿಸ್ಚಾರ್ಜ ಸಮರಿಯ ಪ್ರಕಾರ ಕೇಶವಮೂರ್ತಿ ಅವರಿಗೆ ಯಾವುದೇ ಆಪರೇಶನ್ ಆಗಿರುವುದಿಲ್ಲ ಎಂದರೆ ಸರಿ. ಅವರಿಗೆ ಆದ ಗಾಯಗಳು ಯಾವುದೇ ರೀತಿ ಅಂಗನ್ಯೂನ್ಯತೆ ಉಂಟು ಮಾಡುವ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ. ನಂಜಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುವ ಸಮಯದಲ್ಲಿ ತೆಗೆದ ಎಕ್ಸರೆ ರಿಪೋರ್ಟಗಳನ್ನು ನೋಡಿರುತ್ತೇನೆ. ನಿಪಿ-17 ಎಕ್ಸರೆ ಪಿಲ್ಮ ಜೊತೆಗೆ ನನ್ನ ಪ್ರತ್ಯೇಕ ರೆಡಿಯಾಲಜಿ ರಿಪೋರ್ಟ ಕೊಟ್ಟಿರುವುದಿಲ್ಲ ಎಂದರೆ ಸರಿ. ರಿಪೋರ್ಟನಲ್ಲಿ ಮೂಳೆ ಸರಿಯಾಗಿ ಜೋಡನೆ ಆಗಿದೆಯೋ ಇಲ್ಲವೋ ಎಂದು ನಮೂದಿರುತ್ತಿತ್ತು ಎಂದರೆ ಸರಿ. ಅರ್ಜಿದಾರ ಕೇಶವಮೂರ್ತಿ ಸಂಪೂರ್ಣ ಗುಣಮುಖವಾಗಿದ್ದು , ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಸಹ ಹೆಚ್ಚಿನ ಪರಿಹಾರ ಬರಲಿ ಎಂದು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

2. ಡಿಸ್ಚಾರ್ಜ ಸಮರಿಯಲ್ಲಿ ಯಾವ ಚಿಕಿತ್ಸೆಕೊಡಲಾಗಿದೆ ಎಂದು ಸಂಪೂರ್ಣವಾಗಿ

ನಮೂದಿರುತ್ತದೆ ಎಂದರೆ ಸರಿ ಅದರಲ್ಲಿ ಎಕ್ಸರೆ ತೆಗೆದಿರುವ ಬಗ್ಗೆಯೂ ನಮೂದಿರುತ್ತದೆ ಎಂದರೆ ಸರಿ. ನಿಪಿ-16 ರಲ್ಲಿ ಶೇಕಡಾ 35 ರಷ್ಟು ಅಂಗನ್ಯೂನ್ಯತೆ ಸಂಬಂಧಿಸಿದ ಎಡಗಾಲಿಗೆ ಕೊಟ್ಟಿರುತ್ತೇನೆ. ಎರಡೂ ಕಾಲುಗಳ ಚಲನೆಯನ್ನು ಪರೀಶಿಲಿಸಿ ನಾನು ಅಂಗನ್ಯೂನ್ಯತೆ ಪ್ರಮಾಣ ನಿರ್ಧರಿಸಿರುತ್ತೇನೆ. ಅರ್ಜಿದಾರ ಕೇಶವಮೂರ್ತಿಯವರ ಬಲಗಾಲಿನ ಚಲನೆಯ ರೇಂಜ್ ಆಫ್ ಮುಮೆಂಟ್ ಎಷ್ಟು ಇತ್ತು ಎಂದು ನಿಪಿ-16 ರಲ್ಲಿ ಬರೆದಿರುವುದಿಲ್ಲ. ಆತನ ಬಲಗಾಲಿನ ಚಲನೆಯಲ್ಲಿ ಮತ್ತು ರೇಂಜ್ ಆಫ್ ಮುಮೆಂಟ್ ನಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ ಆದ್ದರಿಂದ ನಿಪಿ-16 ರಲ್ಲಿ ಅದನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯವಾಗಲಿ ಎಂದು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾಗಿ 5 ವರ್ಷಗಳ ಒಳಗೆ ಆತನ ಅಂಗನ್ಯೂನ್ಯತೆ ಯನ್ನು ಅಸೆಸ್ ಮಾಡಬಹುದು. ಡಿ ಜಿ ಹೆಚ್ ಎಸ್ ಗೈಡಲೈನ್ಸ ಪ್ರಕಾರ 2 ವರ್ಷದ ಒಳಗೆ ಮಾತ್ರ ಅಂಗನ್ಯೂನ್ಯತೆ ಪ್ರಮಾಣ ನಿರ್ಧರಿಸಬಹುದು ಎಂದರೆ ಸರಿಯಲ್ಲ.

3. ಅರ್ಜಿದಾರರಾದ ಸುಮಾ ದಿಃ 24-09-2024 ರಂದು ನನ್ನ ಬಳಿ ಬಂದಿದ್ದರು. ದಿಃ 24-09-2024 ರ ಪೂರ್ವದಲ್ಲಿ ಅರ್ಜಿದಾರರಾದ ಸುಮಾ ನನ್ನ ಬಳಿ ಯಾವುದೇ ಚಿಕಿತ್ಸೆ ಪಡೆದಿರಲಿಲ್ಲ. ನನ್ನ ಬಳಿ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಬಂದಿದ್ದರು ಎಂದರೆ ಸರಿ. ಡಿ ಜಿ ಹೆಚ್ ಎಸ್ ಗೈಡ್ ಲೈನ್ಸ ಪ್ರಕಾರ ನಾನು ಅಂಗನ್ಯೂನ್ಯತೆ ಪ್ರಮಾಣವನ್ನು ನಿರ್ಧಾರ ಮಾಡಿರುತ್ತೇನೆ. ಅವರಿಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡುವ ಪೂರ್ವದಲ್ಲಿ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ ಮತ್ತು ಎಕ್ಸರೆ ಮಾಡಿರುತ್ತೇನೆ. ಅವರ ಗಾಯದ ಪ್ರಮಾಣ ಪತ್ರ, ಬಿಡುಗಡೆ ಪ್ರಮಾಣ ಪತ್ರಗಳನ್ನು ಪರಿಶೀಲಿಸಿರುತ್ತೇನೆ. ಡಿಸ್ಚಾರ್ಜ ಸಮರಿಯ ಪ್ರಕಾರ ಸುಮಾ ಅವರಿಗೆ ಯಾವುದೇ ಆಪರೇಶನ್ ಆಗಿರುವುದಿಲ್ಲ ಎಂದರೆ ಸರಿ. ಅವರಿಗೆ ಆದ ಗಾಯಗಳು ಯಾವುದೇ ರೀತಿ ಅಂಗನ್ಯೂನ್ಯತೆ ಉಂಟು ಮಾಡುವ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ. ನಂಜಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ತೆಗೆದ ಎಕ್ಸರೆ ರಿಪೋರ್ಟಗಳನ್ನು ನೋಡಿರುತ್ತೇನೆ. ನಿಪಿ-28 ಎಕ್ಸರೆ ಪಿಲ್ಮ ಜೊತೆಗೆ ನನ್ನ ಪ್ರತ್ಯೇಕ ರೆಡಿಯಾಲಜಿ ರಿಪೋರ್ಟ ಕೊಟ್ಟಿರುವುದಿಲ್ಲ ಎಂದರೆ ಸರಿ. ರಿಪೋರ್ಟನಲ್ಲಿ ಮೂಳೆ ಸರಿಯಾಗಿ ಜೋಡನೆ ಆಗಿದೆಯೋ ಇಲ್ಲವೋ ಎಂದು ನಮೂದಿರುತ್ತಿತ್ತು ಎಂದರೆ ಸರಿ. ಅರ್ಜಿದಾರ ಸುಮಾ ಸಂಪೂರ್ಣ ಗುಣಮುಖವಾಗಿದ್ದು , ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಸಹ ಹೆಚ್ಚಿನ ಪರಿಹಾರ ಬರಲಿ ಎಂದು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

2. ಡಿಸ್ಚಾರ್ಜ ಸಮರಿಯಲ್ಲಿ ಯಾವ ಚಿಕಿತ್ಸೆ ಕೊಡಲಾಗಿದೆ ಎಂದು ಸಂಪೂರ್ಣವಾಗಿ

ನಮೂದಿರುತ್ತದೆ ಎಂದರೆ ಸರಿ ಅದರಲ್ಲಿ ಎಕ್ಸರೆ ತೆಗೆದಿರುವ ಬಗ್ಗೆಯೂ ನಮೂದಿರುತ್ತದೆ ಎಂದರೆ ಸರಿ. ನಿಪಿ-27 ರಲ್ಲಿ ಶೇಕಡಾ 35 ರಷ್ಟು ಅಂಗನ್ಯೂನ್ಯತೆ ಸಂಬಂಧಿಸಿದ ಎಡಗಾಲಿಗೆ ಕೊಟ್ಟಿರುತ್ತೇನೆ. ಎರಡೂ ಕಾಲುಗಳ ಚಲನೆಯನ್ನು ಪರೀಶಿಲಿಸಿ ನಾನು ಅಂಗನ್ಯೂನ್ಯತೆ ಪ್ರಮಾಣ ನಿರ್ಧರಿಸಿರುತ್ತೇನೆ. ಅರ್ಜಿದಾರ ಸುಮಾರವರ ಬಲಗಾಲಿನ ಚಲನೆಯ ರೇಂಜ್ ಆಫ್ ಮುಮೆಂಟ್ ಎಷ್ಟು ಇತ್ತು ಎಂದು ನಿಪಿ-27 ರಲ್ಲಿ ಬರೆದಿರುವುದಿಲ್ಲ. ಆತನ ಬಲಗಾಲಿನ ಚಲನೆಯಲ್ಲಿ ಮತ್ತು ರೇಂಜ್ ಆಫ್ ಮುಮೆಂಟ್ ನಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ ಆದ್ದರಿಂದ ನಿಪಿ-27 ರಲ್ಲಿ ಅದನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯವಾಗಲಿ ಎಂದು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾಗಿ 5 ವರ್ಷಗಳ ಒಳಗೆ ಆತನ ಅಂಗನ್ಯೂನ್ಯತೆ ಯನ್ನು ಅಸೆಸ್ ಮಾಡಬಹುದು. ಡಿ ಜಿ ಹೆಚ್ ಎಸ್ ಗೈಡಲೈನ್ಸ ಪ್ರಕಾರ 2 ವರ್ಷದ ಒಳಗೆ ಮಾತ್ರ ಅಂಗನ್ಯೂನ್ಯತೆ ಪ್ರಮಾಣ ನಿರ್ಧರಿಸಬಹುದು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.